**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 4622/2022**

**ಸಾಕ್ಷಿಗೆ ದಿನಾಂಕ 8.10.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹಮದ್ ತೌಫಿಕ್ | ಪಿ.ಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | : | ಮಹಮದ್ ರಫೀಕ್ | ಸಿ.ಡಬ್ಲ್ಯೂ-3 |
| ವಯಸ್ಸು | : | 36 | |
| ಉದ್ಯೋಗ | : | ವ್ಯಾಪಾರ | |
| ವಾಸಸ್ಥಳ | : | ಹಂಪಾಪುರ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯವಿರುತ್ತದೆ. ನನಗೆ ಚಾಸ 2, 4 ರಿಂದ 9 ರವರ ಪರಿಚಯವಿರುತ್ತದೆ. ದಿನಾಂಕ 16.11.2020 ರಂದು ದೀಪಾವಳಿ ಹಬ್ಬದ ದಿನ ಬೆಳಿಗ್ಗೆ 10 ರಿಂದ 11 ಗಂಟೆಯಲ್ಲಿ ನನ್ನ ಮೊಬೈಲ್ ಸಂಖ್ಯೆ 9986180529 ರಲ್ಲಿ ನನ್ನ ಫೇಸ್ ಬುಕ್ ಅಕೌಂಟನ್ನು ನೋಡುತ್ತಿದ್ದಾಗ ಲಕ್ಷ್ಮಿ ನಾರಾಯಣ್ ಎಂಬುವವರು ತನ್ನ ಲಕ್ಷ್ಮಿನಾರಾಯಣ ಅಜಾದ್ ಎಂಬ ಹೆಸರಿನ ಫೇಸ್ ಬುಕ್ ಅಕೌಂಟಿನಲ್ಲಿ ಬುರ್ಕಾ ತುರ್ಕಾ, ಮುಸ್ಲಿಂಮರು ದೇಶಕ್ಕೆ ಮಾರಕ ಎಂದು ಮುಸ್ಲಿಂಮರನ್ನು ಹಿಯಾಳಿಸಿರುವುದು ಕಂಡು ಬಂದಿರುತ್ತದೆ. ಅದೇ ರೀತಿ ನಮ್ಮ ಊರಿನ ಚಾಸ 2, 9 ರವರ ಸಹ ಅವರ ಫೇಸ್ ಬುಕ್ ಅಕೌಂಟಿನಲ್ಲಿ ಸದರಿ ಪೋಸ್ಟರನ್ನು ನೋಡಿ ನನಗೆ ಹೇಳಿರುತ್ತಾರೆ. ನಂತರ ಸದರಿ ಪೋಸ್ಟರಿನ ಬಗ್ಗೆ ವಿಚಾರಿಸಿದಾಗ ನಮ್ಮ ಊರಿನ ನ್ಯಾಯಾಲಯದ ಮುಂದಿರುವ ಆರೋಪಿಯು ಕೋಮು ಪ್ರಚೋದನೆ ಮಾಡಲು ಆ ರೀತಿ ಪೋಸ್ಟರನ್ನು ಫೇಸ್ ಬುಕ್‌ಗೆ ಅಪ್‌ಲೋಡ್ ಮಾಡಿರುವುದು ಕಂಡು ಬಂದಿರುತ್ತದೆ. ನಂತರ ನಮ್ಮ ಗ್ರಾಮದಲ್ಲಿ ಸೇರಿಕೊಂಡು ಗ್ರಾಮದ ಮುಖಂಡರಿಗೆ ತಿಳಿಸಿದ್ದು, ಅವರು ಕಾನೂನು ಪ್ರಕಾರ ಮುಂದುವರಿಯಲು ಹೇಳಿರುತ್ತಾರೆ. ನಂತರ ನಾವೆಲ್ಲರೂ ಹೆಚ್.ಡಿ.ಪೋಲಿಸ್ ಠಾಣೆಗೆ ಬಂದು ಚಾಸ 1 ರವರಿಗೆ ಮೌಖಿಕವಾಗಿ ತಿಳಿಸಿ, ಚಾಸ 2 ರವರು ಸದರಿ ಪೋಸ್ಟರ್ ಪ್ರತಿಗಳನ್ನು ಚಾಸ 1 ರವರಿಗೆ ನೀಡಿರುತ್ತಾರೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ